# ಮಂಗಳೂರು ವಿಶ್ವವಿದ್ಯಾನಿಲಯ

ದಿನಾಂಕ 16.05.2022ರಂದು ಪೂರ್ವಾಹ್ನ ಗಂಟೆ 11.00ಕ್ಕೆ ಸರಿಯಾಗಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇಲ್ಲಿ ನಡೆದ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿನ 2022ನೇ ಸಾಲಿನ ನಾಲ್ಕನೆಯ ಸಾಮಾನ್ಯ ಸಭೆಯ ನಡವಳಿಗಳು.

**ಉಪಸ್ಥಿತರು:**

| ಕ್ರ.ಸಂ. | | | ಸಹಿ |
|---|---|---|---|
| 1. | ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ | ಅಧ್ಯಕ್ಷರು | |
| 2. | ಡಾ. ಜೆನಿಫರ್ ಲೋಲಿಟಾ ಸಿ.,<br>ಜಂಟಿ ನಿರ್ದೇಶಕರು<br>(ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು | |
| 3. | ಪ್ರೊ. ಕರುಣಾಕರ್ ಎ. ಕೋಟೆಗಾರ್<br>Online ಮೂಲಕ | ಸದಸ್ಯರು | |
| 4. | ಶ್ರೀ ರವಿಚಂದ್ರ ಪಿ. ಎಂ. | ಸದಸ್ಯರು | |
| 5. | ಡಾ. ಜೆರಾಲ್ಡ್ ಸಂತೋಷ್ ಡಿ'ಸೋಜ<br>ಡೀನರು, ಶಿಕ್ಷಣ ನಿಕಾಯ | ಸದಸ್ಯರು | |
| 6. | ಫಾ. ಅಲ್ವಿನ್ ಸೆರಾವೋ | ಸದಸ್ಯರು | |
| 7. | ಡಾ. ಶಂಕರ ಭಟ್ ಪಿ. | ಸದಸ್ಯರು | |
| 8. | ಶ್ರೀಮತಿ ಸುಭಾಷಿಣಿ ಶ್ರೀವತ್ಸ | ಸದಸ್ಯರು | |
| 9. | ಶ್ರೀ ಕೆ. ರಮೇಶ | ಸದಸ್ಯರು | |
| 10. | ಶ್ರೀ ವಿವೇಕಾನಂದ ಪನಿಯಾಳ | ಸದಸ್ಯರು | |
| 11. | ಶ್ರೀ ರವೀಂದ್ರನಾಥ ರೈ | ಸದಸ್ಯರು | |
| 12. | ಡಾ. ಎಂ. ಎಸ್. ತಳವಾರ | ಸದಸ್ಯರು | |
| 13. | ಶ್ರೀಮೋಹನ್ ಪಡಿವಾಳ್ | ಸದಸ್ಯರು | |
| 14. | ಡಾ. ಎ. ಪಾರ್ವತಿ ಅಪ್ಪಯ್ಯ | ಸದಸ್ಯರು | |
| 15. | ಪ್ರೊ. ವಿಶ್ವನಾಥ್<br>ಪ್ರಾಧ್ಯಾಪಕರು,<br>ಸ್ನಾತಕೋತ್ತರ ಅರ್ಥಶಾಸ್ತ್ರ ವಿಭಾಗ | ಸದಸ್ಯರು | |
| 16. | ಡಾ. ಸಿಪ್ರಿಯನ್ ಮೊಂತೇರೋ<br>ಪ್ರಾಂಶುಪಾಲರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ,<br>ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ | ಸದಸ್ಯರು | |
| 17. | ಪ್ರೊ. ಪಿ. ಎಲ್. ಧರ್ಮ<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು | |
| 18. | ಪ್ರೊ. ಕೆ. ಎಸ್. ಜಯಪ್ಪ<br>ಹಣಕಾಸು ಅಧಿಕಾರಿ (ಪ್ರಭಾರ) | ವಿಶೇಷ ಆಹ್ವಾನಿತರು | |
| 19. | ಪ್ರೊ. ಕಿಶೋರ್ ಕುಮಾರ್ ಸಿ. ಕೆ.<br>ಕುಲಸಚಿವರು (ಆಡಳಿತ) | ಸದಸ್ಯ ಕಾರ್ಯದರ್ಶಿ | |

## ಪ್ರಾರಂಭಿಕ

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

➢ **ಸ್ವಾಗತ:**

I. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 28(1)(ಬಿ) ಪ್ರಕಾರ ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಗಳಿಗೆ ಜಂಟಿ ನಿರ್ದೇಶಕರ ನೆಲೆಯಲ್ಲಿ ಹಾಜರಾಗಲು ಆಗಮಿಸಿರುವ ಡಾ. ಜೆನಿಫರ್ ಲೋಲಿಟಾ ಸಿ, ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಮಂಗಳೂರು ಇವರನ್ನು ಕುಲಸಚಿವರು ಸಭೆಗೆ ಸ್ವಾಗತಿಸಿದರು.

II. ದಿನಾಂಕ 04.05.2022ರಿಂದ ಅನ್ವಯವಾಗುವಂತೆ ಮಂಗಳೂರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿ ಹುದ್ದೆಯ ಪ್ರಭಾರವನ್ನು ವಹಿಸಿರುವ ಪ್ರೊ. ಕೆ. ಎಸ್. ಜಯಪ್ಪ, ಪ್ರಾಧ್ಯಾಪಕರು, ಸ್ನಾತಕೋತ್ತರ ಸಾಗರ ಭೂ ವಿಜ್ಞಾನ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರು ವಿಶೇಷ ಆಹ್ವಾನಿತರ ನೆಲೆಯಲ್ಲಿ ಸಿಂಡಿಕೇಟು ಸಭೆಗೆ ಆಗಮಿಸಿದ್ದು, ಇವರನ್ನು ಕುಲಸಚಿವರು ಸಭೆಗೆ ಸ್ವಾಗತಿಸಿದರು.

➢ **ಕೃತಜ್ಞತೆ:**

I. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 28(1)(ಬಿ) ಪ್ರಕಾರ ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಗಳಿಗೆ ಜಂಟಿ ನಿರ್ದೇಶಕರ ನೆಲೆಯಲ್ಲಿ ಹಾಜರಾಗುತ್ತಿದ್ದ ಶ್ರೀ ಶ್ರೀಧರ ಬಾಬು ಎ.ಜೆ. ಇವರು ವಯೋನಿವೃತ್ತಿ ಹೊಂದಿರುವ ವಿಷಯವನ್ನು ಕುಲಸಚಿವರು ಸಭೆಗೆ ತಿಳಿಸಿದರು.

II. ಮಂಗಳೂರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿ ಹುದ್ದೆಯ ಪ್ರಭಾರವನ್ನು ವಹಿಸಿ ವಿಶೇಷ ಆಹ್ವಾನಿತರ ನೆಲೆಯಲ್ಲಿ ಸಿಂಡಿಕೇಟು ಸಭೆಗಳಿಗೆ ಹಾಜರಾಗುತ್ತಿದ್ದ ಪ್ರೊ. ವೈ. ಮುನಿರಾಜು, ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಇವರು ದಿನಾಂಕ 04.05.2022ರ ಅಪರಾಹ್ನದಿಂದ ಹಣಕಾಸು ಅಧಿಕಾರಿ ಹುದ್ದೆಯ ಪ್ರಭಾರದಿಂದ ಬಿಡುಗಡೆಗೊಂಡಿರುವ ವಿಷಯವನ್ನು ಕುಲಸಚಿವರು ಸಭೆಗೆ ತಿಳಿಸಿದರು.

ಇವರು ತಮ್ಮ ಅವಧಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುವುದಕ್ಕಾಗಿ ಇವರಿಗೆ ಸಿಂಡಿಕೇಟ್ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಪರವಾಗಿ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು.

**ಮಂಗಳೂರು ವಿಶ್ವವಿದ್ಯಾನಿಲಯದ ನಾಲ್ಕನೆಯ ಸಾಮಾನ್ಯ ಸಭೆಯನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನಲ್ಲಿ ನಡೆಸಲು ಸ್ಥಳಾವಕಾಶ ನೀಡಿರುವುದಕ್ಕೆ ಉನ್ನತ ಶಿಕ್ಷಣ ಪರಿಷತ್‌ನ ಸಂಬಂಧಿತ ಎಲ್ಲಾ ಅಧಿಕಾರಿ ವರ್ಗದವರಿಗೆ ಮಂಗಳೂರು ವಿಶ್ವವಿದ್ಯಾನಿಲಯದ ಪರವಾಗಿ ಮಾನ್ಯ ಕುಲಪತಿಗಳು ಕೃತಜ್ಞತೆಗಳನ್ನು ಸಲ್ಲಿಸಿದರು.**

## I. ನಡವಳಿಗಳ ದೃಢೀಕರಣ

1. ದಿನಾಂಕ 13.04.2022ರಂದು ನಡೆದ ಸಿಂಡಿಕೇಟಿನ 2022ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ನಡವಳಿಯ ದೃಢೀಕರಣ.

   **- ದೃಢೀಕರಿಸಲಾಯಿತು. -**

2. ದಿನಾಂಕ 22.04.2022ರಂದು ನಡೆದ ಸಿಂಡಿಕೇಟಿನ 2022ನೇ ಸಾಲಿನ ತೃತೀಯ ವಿಶೇಷ ಸಭೆ (ಘಟಿಕೋತ್ಸವ)ಯ ನಡವಳಿಯ ದೃಢೀಕರಣ.

   **- ದೃಢೀಕರಿಸಲಾಯಿತು. -**

## II. ಅನುಸರಣಾ ವರದಿಯ ಅನುಮೋದನೆ

1. ದಿನಾಂಕ 28.02.2022ರಂದು ನಡೆದ ಸಿಂಡಿಕೇಟಿನ 2022ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.
   ಅನುಸರಣಾ ವರದಿಯನ್ನು ಈ ಕೆಳಗಿನ ಅಂಶಗಳನ್ನು ಸೇರ್ಪಡೆಗೊಳಿಸಿ, ಅನುಮೋದಿಸಲಾಯಿತು.
   ಕ್ರಮ ಸಂಖ್ಯೆ 22ರಲ್ಲಿ ನಮೂದಿಸಲಾಗಿರುವ ಅನುಸರಣಾ ವರದಿಯನ್ನು ವಿಸ್ತೃತವಾಗಿ ಚರ್ಚಿಸಲಾಯಿತು. ಸದರಿ ವಿಷಯಕ್ಕೆ ಸಂಬಂಧಿಸಿ, ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಸೇವೆ ಸಲ್ಲಿಸಿ ಖಾಯಂಗೊಂಡಿರುವ 17 ಮಂದಿ ಬೋಧಕೇತರ ಸಿಬ್ಬಂದಿಗಳಿಗೆ ತಮ್ಮ ಖಾಯಂ ಪೂರ್ವದ ಸೇವೆಯನ್ನು ಸೇವಾಹಿರಿತನಕ್ಕೆ ಪರಿಗಣಿಸುವ ಬಗೆಗಿನ ಪರಿನಿಯಮವು ಸರಕಾರದಿಂದ ಅನುಮೋದನೆಗೊಳ್ಳುವ ನಿರೀಕ್ಷೆ ಮೇರೆಗೆ ಪ್ರಸ್ತುತ ಮುಂಭಡ್ತಿ ನೀಡಲು ಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

2. ದಿನಾಂಕ 11.03.2022ರಂದು ನಡೆದ ಸಿಂಡಿಕೇಟಿನ 2022ನೇ ಸಾಲಿನ ಪ್ರಥಮ ವಿಶೇಷ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.

   **- ಅನುಮೋದಿಸಲಾಯಿತು. -**

## ಪ್ರಾಸ್ತಾವಿಕ

ಮಾನ್ಯ ಕುಲಪತಿಗಳು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಈ ಕೆಳಗಿನ ವಿಷಯಗಳನ್ನು ಸಭೆಗೆ ತಿಳಿಸಿದರು.

1. ಮಂಗಳೂರು ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿ ದಿನಾಂಕ 14.05.2022 ಮತ್ತು ದಿನಾಂಕ 15.05.2022ರಂದು ನಡೆದ ಉದ್ಯೋಗ ಮೇಳವನ್ನು ಯಶಸ್ವಿಯಾಗಿ ನಡೆಸಲಾಗಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದರು. ಸದರಿ ಉದ್ಯೋಗ ಮೇಳದಲ್ಲಿ ಸುಮಾರು 1800 ಮಂದಿ ಉದ್ಯೋಗಾಕಾಂಕ್ಷಿಗಳು ಭಾಗವಹಿಸಿದ್ದು, ಸುಮಾರು 40 ಜನ ಆಯ್ಕೆಯಾಗಿದ್ದು, ಸುಮಾರು 769 ಜನರು ಕಾಯ್ದಿರಿಸುವ ಪಟ್ಟಿಯಲ್ಲಿರುವ ವಿಚಾರವನ್ನು ಸಭೆಗೆ ತಿಳಿಸಿದರು.
2. ಮಂಗಳೂರು ವಿಶ್ವವಿದ್ಯಾನಿಲಯದ ಮಂಗಳಾ ಯೋಜನೆ –ಗ್ರಾಮ ದತ್ತು ಸ್ವೀಕಾರ ಕಾರ್ಯಕ್ರಮ ಹಾಗೂ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಕೊರಗ ಸಂಘಟನೆಗಳ ಸಹಯೋಗದಲ್ಲಿ ದಿನಾಂಕ 14.05.2022ರಂದು ಕುದ್ಮುಲ್ ರಂಗರಾವ್ ಸಮುದಾಯ ಭವನ, ಕೋಡಿಕಲ್, ಮಂಗಳೂರು ಇಲ್ಲಿ ಕೊರಗ ಸಮುದಾಯದ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಕಾರ್ಯಾಗಾರ ನಡೆಸಲಾಗಿರುವ ವಿಚಾರವನ್ನು ಸಭೆಗೆ ತಿಳಿಸಿದರು.

3. ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ನವೆಂಬರ್ 2022ರಲ್ಲಿ NAAC 4th Cycle ಗೆ ಒಳಗೊಳ್ಳಬೇಕಾದ ವಿಚಾರವನ್ನು ತಿಳಿಸುತ್ತಾ ತತ್ಸಂಬಂಧ ನಡೆಸಿರುವ ಸಿದ್ಧತೆಯನ್ನು ಪರಿಶೀಲಿಸಿರುವ ಬಗ್ಗೆಯೂ ಸಭೆಗೆ ತಿಳಿಸಿದರು.
4. ಮಂಗಳೂರು ವಿಶ್ವವಿದ್ಯಾನಿಲಯದ ಎಲ್ಲಾ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಗಳ ಎಪ್ರಿಲ್ 2022ರ ವೇತನವನ್ನು HRMSಮೂಲಕ ನಡೆಸಲಾಗಿರುವ ವಿಚಾರವನ್ನು ಸಭೆಗೆ ತಿಳಿಸಿದರು.
5. ಮಂಗಳೂರು ವಿಶ್ವವಿದ್ಯಾನಿಲಯದ ನಾಲ್ಕನೆಯ ಸಾಮಾನ್ಯ ಸಭೆಯನ್ನು ಈ ಕೆಳಗಿನ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನಲ್ಲಿ ನಡೆಸಲು ಕ್ರಮಕೈಗೊಂಡಿರುವುದಾಗಿ ತಿಳಿಸಿದರು.
   a. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಖಾಲಿಯಿರುವ ಶಿಕ್ಷಕ ಮತ್ತ ಶಿಕ್ಷಕೇತರ ಸಿಬ್ಬಂದಿಗಳನ್ನು ನೇರ ನೇಮಕಾತಿಯಡಿಯಲ್ಲಿ ಭರ್ತಿಗೊಳಿಸುವ ಪ್ರಸ್ತಾವನೆಯನ್ನು ಈಗಾಗಲೇ ಸರಕಾರಕ್ಕೆ ಕಳುಹಿಸಲಾಗಿದ್ದು, ವಿಶ್ವವಿದ್ಯಾನಿಲಯದಲ್ಲಿ ಸಿಬ್ಬಂದಿಗಳ ವಯೋನಿವೃತ್ತಿಯಿಂದ ಖಾಲಿಯಾಗಿರುವ ಹುದ್ದೆಗಳನ್ನು ಶೀಘ್ರದಲ್ಲಿ ಭರ್ತಿಗೊಳಿಸುವಂತೆ ಸರಕಾರವನ್ನು ಕೋರುತ್ತಾ ಈ ಬಗ್ಗೆ ಉನ್ನತ ಶಿಕ್ಷಣ ಸಚಿವರನ್ನು ಎಲ್ಲಾ ಸಿಂಡಿಕೇಟು ಸದಸ್ಯರು ಮತ್ತು ವಿಶ್ವವಿದ್ಯಾನಿಲಯದ ಅಧಿಕಾರಿಗಳು ಭೇಟಿಯಾಗಿ ಮನವಿಯನ್ನು ಸಲ್ಲಿಸಲಾಗುವುದೆಂಬುದಾಗಿ ಸಭೆಗೆ ತಿಳಿಸಿದರು.
   b. ವಿಶ್ವವಿದ್ಯಾನಿಲಯದಿಂದ ಸರಕಾರಕ್ಕೆ ಕಳುಹಿಸಿ ಅನುಮೋದನೆಗೆ ಬಾಕಿಯಿರುವ ಪರಿನಿಯಮ ಮತ್ತು ವಿನಿಯಮಗಳನ್ನು ಶೀಘ್ರ ವಿಲೇವಾರಿ ಮಾಡುವಂತೆ ಸರಕಾರದ ಸಂಬಂಧಿತ ಅಧಿಕಾರಿಗಳನ್ನು ಭೇಟಿಯಾಗಿ ಮನವಿ ಮಾಡಿಕೊಳ್ಳಲಾಗುವುದೆಂಬುದಾಗಿ ಸಭೆಗೆ ತಿಳಿಸಿದರು.
   c. ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು, ಮಂಗಳೂರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳಗಂಗೋತ್ರಿ ಮತ್ತು ವಿಶ್ವವಿದ್ಯಾನಿಲಯ ಕಾಲೇಜು, ನೆಲ್ಯಾಡಿ ಇವುಗಳ ಪರಿನಿಯಮಗಳನ್ನು ಈಗಾಗಲೇ ಸರಕಾರಕ್ಕೆ ಕಳುಹಿಸಲಾಗಿದ್ದು, ಈ ಬಗ್ಗೆಯೂ ಸರಕಾರದೊಂದಿಗೆ ಚರ್ಚಿಸಿ, ಶೀಘ್ರದಲ್ಲಿ ಪರಿನಿಯಮಗಳನ್ನು ಅನುಮೋದಿಸಿ ಹಿಂದಿರುಗಿಸುವ ಬಗ್ಗೆ ಮನವಿ ಮಾಡಿಕೊಳ್ಳಲಾಗುವುದೆಂಬುದಾಗಿ ಸಭೆಗೆ ತಿಳಿಸಿದರು.
   d. ಅರೆಭಾಷೆ ಕನ್ನಡ, ಕುಂದ ಕನ್ನಡ ಇವುಗಳ ಅಧ್ಯಯನ ಪೀಠಗಳ ಸ್ಥಾಪನೆಗೆ ಸಂಬಂಧಿಸಿ ಸರಕಾರದ ಅನುದಾನವನ್ನು ಒದಗಿಸುವಂತೆ ಮತ್ತೊಮ್ಮೆ ಮನವಿ ಮಾಡಿಕೊಳ್ಳಲಾಗುವುದೆಂಬುದಾಗಿ ಸಭೆಗೆ ತಿಳಿಸಿದರು.
   e. ಮಂಗಳೂರು ವಿಶ್ವವಿದ್ಯಾನಿಲಯದಿಂದ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಅನುಮೋದನೆ / ನಿರ್ದೇಶನ / ಆದೇಶಗಳಿಗೆ ಬರೆಯಲಾಗಿರುವ ಪತ್ರಗಳಲ್ಲಿ ಬಾಕಿಯಿರುವ ಪತ್ರಗಳ ಪುನರ್‌ವಿಮರ್ಶನೆಗಾಗಿ ಸಂಬಂಧಿತ ಅಧಿಕಾರಿಗಳನ್ನು ಭೇಟಿಯಾಗಿ ಮನವಿ ಮಾಡಿಕೊಳ್ಳಲಾಗುವುದೆಂಬುದಾಗಿ ಸಭೆಗೆ ತಿಳಿಸಿದರು.
   f. ಮಂಗಳೂರು ವಿಶ್ವವಿದ್ಯಾನಿಲಯದ Social Welfare Projects ಗಳ ಬಗ್ಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಅಧಿಕಾರಿಗಳೊಂದಿಗೆ ಖುದ್ದಾಗಿ ಭೇಟಿಯಾಗಿ ಚರ್ಚಿಸಲಾಗುವುದೆಂಬುದಾಗಿ ಸಭೆಗೆ ತಿಳಿಸಿದರು.
6. ಮಂಗಳೂರು ವಿಶ್ವವಿದ್ಯಾನಿಲಯದ 40 ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿಯನ್ನು ಪಡೆದುಕೊಂಡಿರುವ ಶ್ರೀಮತಿ ಹೇಮಾವತಿ ವಿ. ಹೆಗ್ಗಡೆ ಇವರು ಮತ್ತು ಧರ್ಮ ಸ್ಥಳದ ಧರ್ಮಾಧಿಕಾರಿ ಪೂಜ್ಯ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಸದರಿ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಿರುವುದಕ್ಕಾಗಿ ಅಬಿನಂದನೆಗಳನ್ನು ಸಲ್ಲಿಸಿರುವ ವಿಚಾರವನ್ನು ಸಿಂಡಿಕೇಟು ಸದಸ್ಯರೋರ್ವರು ಸಭೆಯ ಗಮನಕ್ಕೆ ತಂದರು. ಮುಂದುವರಿದು, ಘಟಿಕೋತ್ಸವದ ಮುಖ್ಯ

ಅತಿಥಿಗಳಾಗಿದ್ದ ಜಸ್ಟಿಸ್ ಎಸ್. ಅಬ್ದುಲ್ ನಝೀರ್ ಇವರು ಕೂಡ ಕಾರ್ಯಕ್ರಮದ ಆಯೋಜನೆ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿರುವುದಾಗಿಯೂ ಸಭೆಗೆ ತಿಳಿಸಿದರು.

## III. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು.

**ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.4:1(2022)**

ವಿಷಯ: ಶೈಕ್ಷಣಿಕ ವರ್ಷ 2022-23ನೇ ಸಾಲಿಗೆ ಹೊಸ/ವಿಸ್ತರಣಾ/ ಮುಂದುವರಿಕೆ/ಶಾಶ್ವತ ಸಂಯೋಜನೆ ಮಂಜೂರು ಮಾಡುವ ಬಗ್ಗೆ ಕಾಲೇಜುಗಳ / ವಿದ್ಯಾಸಂಸ್ಥೆಗಳ ಪರಿಶೀಲನೆಗೆ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಚರ್ಚಿಸಲಾಯಿತು. ಈ ಕೆಳಗಿನ ಸದಸ್ಯರುಗಳನ್ನು ಹೊರತುಪಡಿಸಿ ಉಳಿದ ಸದಸ್ಯರು ಸ್ಥಳೀಯ ವಿಚಾರಣಾ ಸಮಿತಿಗೆ ತಮ್ಮನ್ನು ಅಧ್ಯಕ್ಷರು / ಸದಸ್ಯರುಗಳನ್ನಾಗಿ ನೇಮಕಾತಿ ಮಾಡಲು ತಮ್ಮ ಒಪ್ಪಿಗೆಯನ್ನು ನೀಡಿದರು.

1. ಶ್ರೀ ವಿವೇಕಾನಂದ ಪನಿಯಾಲ
2. ಡಾ. ಸಿಪ್ರಿಯನ್ ಮೊಂತೇರೋ
3. ಫಾ. ಅಲ್ವಿನ್ ಸೆರಾವೋ

**ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.4:2(2022)**

ವಿಷಯ: ಶೈಕ್ಷಣಿಕ ವರ್ಷ 2021-22ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ವಿಭಾಗಗಳಲ್ಲಿ ವಿಶ್ವವಿದ್ಯಾನಿಲಯ ಘಟಕ ಕಾಲೇಜುಗಳಲ್ಲಿ ಮತ್ತು ಜ್ಞಾನ ಕಾವೇರಿ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇಲ್ಲಿ ನಡೆಸಲ್ಪಡುವ ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ವಿದ್ಯಾರ್ಥಿ ಪರಿಮಿತಿಯನ್ನು ನಿಗದಿಪಡಿಸುವ ಬಗ್ಗೆ.

ನಿರ್ಣಯ: ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಆಡಳಿತ:ಸಾ.ಸ.4:3(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರ ಕಛೇರಿಯಲ್ಲಿರುವ Dx2430 ಡುಪ್ಲೋ ಯಂತ್ರಗಳಿಗೆ ಅಗತ್ಯವಿರುವ ಮಾಸ್ಟರ್ ರೋಲ್ ಹಾಗೂ ಇಂಕ್‌ಗಳನ್ನು ಒಂದು ವರ್ಷದ ಅವಧಿಗೆ ಸರಬರಾಜು ಮಾಡುವ ಧಾರಣಾ ಗುತ್ತಿಗೆ ದರ ನಿಗದಿಪಡಿಸುವ ಕುರಿತು.

ನಿರ್ಣಯ: ದಿನಾಂಕ 27.04.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಆಡಳಿತ:ಸಾ.ಸ.4:4(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ/ಕಛೇರಿಗಳ, ಸ್ನಾತಕೋತ್ತರ ಕೇಂದ್ರಗಳ ಮತ್ತು ಘಟಕ ಕಾಲೇಜುಗಳಿಗೆ ಅಗತ್ಯವಿರುವ ಕಂಪ್ಯೂಟರ್ ಪ್ರಿಂಟರ್‌ಗಳಿಗೆ ಕಂಪ್ಯೂಟರ್ ಸ್ಟೇಶನರಿ (ಲೇಸರ್ ಜೆಟ್ ಟೋನರ್ ಮತ್ತು ಇಂಕ್ ಜೆಟ್ ಕಾಟ್ರೇಡ್ಜ್) ಖರೀದಿಸಲು ಧಾರಣಾ ಗುತ್ತಿಗೆದಾರರನ್ನು ನಿಗದಿಗೊಳಿಸುವ ಬಗ್ಗೆ.

ನಿರ್ಣಯ: ದಿನಾಂಕ 27.04.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಆಡಳಿತ:ಸಾ.ಸ.4:5(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗ/ಕಛೇರಿಗಳಿಗೆ ಘಟಕ ಕಾಲೇಜುಗಳಿಗೆ ಖರೀದಿಸಿದ Acer ಡೆಸ್ಕ್ ಟಾಪ್ ಮತ್ತು Acer ಲ್ಯಾಪ್ ಟಾಪ್‌ಗಳ ವಾರ್ಷಿಕ ನಿರ್ವಹಣೆಯ ಬಗ್ಗೆ.

ನಿರ್ಣಯ: ದಿನಾಂಕ 27.04.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಆಡಳಿತ:ಸಾ.ಸ.4:6(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳು/ಕಛೇರಿ /ಕೇಂದ್ರಗಳಿಗೆ ಬೇಕಾಗುವ ಗಣಕಯಂತ್ರ/ ಲ್ಯಾಪ್‌ಟಾಪ್ /ಪ್ರಿಂಟರ್‌ಗಳನ್ನು ಖರೀದಿಸುವ ಬಗ್ಗೆ.

ನಿರ್ಣಯ: ದಿನಾಂಕ 27.04.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.4:7(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಗ್ರಂಥಾಲಯ – ಗ್ರಂಥಾಲಯದ ಪುಸ್ತಕ ಮತ್ತು ನಿಯತಕಾಲಿಕೆಗಳ ಬೈಂಡಿಂಗ್ ಮಾಡಿಸುವ ಪ್ರಸ್ತಾವನೆಗೆ ಮಂಜೂರಾತಿ ನೀಡುವ ಬಗ್ಗೆ.

ನಿರ್ಣಯ: ದಿನಾಂಕ 27.04.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.4:8(2022)**

ವಿಷಯ: 35 MBPS 4W MLLN ಲೀಸ್ಡ್ ಲೈನ್ ಪೋರ್ಟ್ ಚಾರ್ಜಸ್ ಶುಲ್ಕ ಪಾವತಿ ಬಗ್ಗೆ.

ನಿರ್ಣಯ: ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.4:9(2022)**

ವಿಷಯ: VGST ಪ್ರಾಜೆಕ್ಟ್ ಭೌತಶಾಸ್ತ್ರ ವಿಭಾಗ – Fourier Transform Infra – Red Spetrometer ಉಪಕರಣ ಖರೀದಿ ಬಗ್ಗೆ.

ನಿರ್ಣಯ: ದಿನಾಂಕ 27.04.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.4:10(2022)**

ವಿಷಯ: ವಿಶ್ವವಿದ್ಯಾನಿಲಯ ವಿಜ್ಞಾನ ಉಪಕರಣ ಕೇಂದ್ರ-FTIR ಉಪಕರಣದ ಬಿಡಿಭಾಗ ಖರೀದಿಯ ಪ್ರಸ್ತಾವನೆ ಬಗ್ಗೆ.

ನಿರ್ಣಯ: ದಿನಾಂಕ 27.04.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.4:11(2022)**

ವಿಷಯ: DBT – Ramalingaswami Re-entry Fellowship – Spectrophotometer ಉಪಕರಣ ಖರೀದಿ ಬಗ್ಗೆ.

ನಿರ್ಣಯ: ದಿನಾಂಕ 27.04.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.4:12(2022)**

ವಿಷಯ: ಡಿಎಸ್ಟಿ ಪರ್ಸ್ ಪ್ರಯೋಗಾಲಯಕ್ಕೆ 30 KVA UPS System ಗೆ 30 ಸಂಖ್ಯೆಯ TUbular Batteries ನ್ನು ಹಳೆಯ ಬ್ಯಾಟರಿಗಳ ವಿನಿಮಯದೊಂದಿಗೆ (buy back) ಖರೀದಿಸಲು ಮಂಜೂರಾತಿ ನೀಡುವ ಬಗ್ಗೆ.

ನಿರ್ಣಯ: ದಿನಾಂಕ 27.04.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ:ಸಾ.ಸ.4:13(2022)**

ವಿಷಯ: 2022ನೇ ಸಾಲಿನ ಪದವಿ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಬೇಕಾದ ಪರೀಕ್ಷಾ ನಮೂನೆ/ಲಕೋಟೆ/ಲೇಖನ ಸಾಮಾಗ್ರಿಗಳನ್ನು ವಿದ್ಯುನ್ಮಾನ ಸಂಗ್ರಹಣ ವಿಧಾನದ ಇ-ಟೆಂಡರು ಮೂಲಕ ಖರೀದಿಸುವ ಬಗ್ಗೆ.

ನಿರ್ಣಯ: ದಿನಾಂಕ 27.04.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ:ಸಾ.ಸ.4:14(2022)**

ವಿಷಯ: ವಿಶ್ವವಿದ್ಯಾನಿಲಯದಲ್ಲಿ Digital ರೂಪದ ಅಂಕಪಟ್ಟಿ / ಪದವಿ ಪ್ರಮಾಣ ಪತ್ರಗಳ ಅನುಷ್ಠಾನದ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಸರಕಾರದ ಪತ್ರದ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ Digital ರೂಪದ ಅಂಕಪಟ್ಟಿ / ಪದವಿ ಪ್ರಮಾಣ ಪತ್ರಗಳನ್ನು ವಿದ್ಯಾರ್ಥಿಗಳಿಗೆ ನೀಡುವ ಬಗ್ಗೆ ಸಮಗ್ರ ಮಾಹಿತಿಯೊಂದಿಗೆ ಕಾರ್ಯಸೂಚಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ:ಸಾ.ಸ.4:15(2022)**

ವಿಷಯ: ಪ್ರಿಂಟರ್ ಡೀಲರುಗಳಿಂದ ಪ್ರಿಂಟರ್‌ನ್ನು ಎರವಲು ಪಡೆಯುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಖರೀದಿ ಪ್ರಕ್ರಿಯೆಯು ಈಗಾಗಲೇ ನಡೆದಿರುವುದರಿಂದ ಪ್ರಸ್ತುತ ತುರ್ತು ಅನಿವಾರ್ಯತೆ ಇರುವುದರಿಂದ ಈ ಒಂದು ಬಾರಿಗೆ ಮಾತ್ರ ಅನ್ವಯವಾಗುವಂತೆ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.4:16(2022)**

ವಿಷಯ: ವಿವಿಧ ಬೋಧಕ/ಇತರ ಶೈಕ್ಷಣಿಕ ಹುದ್ದೆಗಳ ನೇಮಕಾತಿ / ಪದೋನ್ನತಿಗೆ ಸಂಬಂಧಿಸಿ ಪರಿಷ್ಕೃತ ಆಯ್ಕೆ ಸಮಿತಿ ರಚನೆಗೆ ಸಂಬಂಧಿಸಿ ವಿಷಯ ತಜ್ಞರ ಪಟ್ಟಿಯನ್ನು ಅನುಮೋದಿಸುವ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು. ಸಮಗ್ರ ಮಾಹಿತಿಯೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ಸೂಕ್ತ ಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.4:17(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಸ್ತು ವಿಜ್ಞಾನ ವಿಭಾಗದ ಯುಜಿಸಿ ಇನ್ನೋವೇಟಿವ್ ಪ್ರೋಗ್ರಾಂನಡಿಯಲ್ಲಿ ನೇಮಕ ಮಾಡಲಾದ ಡಾ. ರಾಣಿ ಎಂ. ಪಟ್ಟಾಭಿ ಇವರಿಗೆ ಬಾಕಿ ವೇತನ ಪಾವತಿಸುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.4:18(2022)**

ವಿಷಯ: ಡಾ. ಪಾರ್ವತಿ ಅಪ್ಪಯ್ಯ ಸಿಂಡಿಕೇಟು ಸದಸ್ಯರು ಮಂಗಳೂರು ವಿಶ್ವವಿದ್ಯಾನಿಲಯ ಇವರು ಸಲ್ಲಿಸಿದ ಪ್ರಸ್ತಾವನೆಗೆ ಸಂಬಂಧಿಸಿ ದಿನಾಂಕ 13.04.2022ರ ಸಿಂಡಿಕೇಟು ಸಭೆಯ ಕಾರ್ಯಸೂಚಿ ಸಂಖ್ಯೆ ಸಿಂಡಿಕೇಟು ವಿ.ಸ.2:12(2022) ರ ನಿರ್ಣಯದಂತೆ ಘಟಕ ಕಾಲೇಜುಗಳ ಶಿಕ್ಷಕರುಗಳ ವರ್ಗಾವಣೆಗೆ ಸಂಬಂಧಿಸಿ ಸಮಗ್ರ ವರದಿಯೊಂದಿಗೆ ಸಿಂಡಿಕೇಟು ಸಭೆಗೆ ಪ್ರಸ್ತಾವನೆ.

ನಿರ್ಣಯ: ನಿಖರವಾದ ಮಾಹಿತಿಯೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ಸೂಕ್ತ ಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.4:19(2022)**

ವಿಷಯ: ದಿನಾಂಕ 01.01.2006 ರಿಂದ ಜಾರಿಗೊಂಡ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಗೆ ಸಂಬಂಧಿಸಿದ ಅನುಶಾಸನದ ಕೆರಿಯರ್ ಅಡ್ವಾನ್ಸ್ ಮೆಂಟ್ ಸ್ಕೀಂ ಪ್ರಕಾರ ಘಟಕ ಕಾಲೇಜಿನ ಬೋಧಕರಿಗೆ ವೃತ್ತಿ ಪದೋನ್ನತಿ – ಸ್ಕ್ರೀನಿಂಗ್ – ಕಂ – ಇವ್ಯಾಲ್ಯುವೇಶನ್ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.4:20(2022)**

ವಿಷಯ: ಪದವಿ ಮತ್ತು ಸ್ನಾತಕೋತ್ತರ ತುಳು ಭಾಷಾ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ ರಚನೆಯ ಬಗ್ಗೆ.

ನಿರ್ಣಯ: ಪದವಿ ಮತ್ತು ಸ್ನಾತಕೋತ್ತರ ತುಳು ಭಾಷಾ ಸಂಯುಕ್ತ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.4:21(2022)**

ವಿಷಯ: ಪದವಿ ಮಟ್ಟದ ಬಿ.ಎಸ್ಸಿ. ಮತ್ತು ಡಿಪ್ಲೊಮಾ ಇನ್ ಆನಿಮೇಶನ್ ಮತ್ತು ವಿಜ್ಯುವಲ್ ಇಫೆಕ್ಟ್ಸ್ ಅಧ್ಯಯನ ಮಂಡಳಿಯ ಪುನರ್ ರಚನೆಯ ಬಗ್ಗೆ.

ನಿರ್ಣಯ: ಪದವಿ ಮಟ್ಟದ ಬಿ.ಎಸ್ಸಿ. ಮತ್ತು ಡಿಪ್ಲೊಮಾ ಇನ್ ಆನಿಮೇಶನ್ ಮತ್ತು ವಿಜ್ಯುವಲ್ ಇಫೆಕ್ಟ್ಸ್ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.4:22(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಭೂಗೋಳಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರ ನೇಮಕಾತಿ ಬಗ್ಗೆ.

ನಿರ್ಣಯ: ಸ್ನಾತಕೋತ್ತರ ಭೂಗೋಳಶಾಸ್ತ್ರ ಅಧ್ಯಯನ ವಿಭಾಗಕ್ಕೆ ಖಾಯಂ ಬೋಧಕರ ನೇಮಕಾತಿ ಬಳಿಕ ವಿಭಾಗಕ್ಕೆ ಅಧ್ಯಕ್ಷರ ನೇಮಕಾತಿಯನ್ನು ಮಾಡಲು ಕ್ರಮಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಪ್ರಸ್ತುತ ಸ್ನಾತಕೋತ್ತರ ಭೂಗೋಳಶಾಸ್ತ್ರ ಕಾರ್ಯಕ್ರಮದ

ಸಂಯೋಜಕರಾಗಿರುವ ಡಾ. ದಶರಥ ಪಿ. ಅಂಗಡಿ, ಸಹ ಪ್ರಾಧ್ಯಾಪಕರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರಿಗೆ ವಿಭಾಗದ ಸ್ವತಂತ್ರ ಪ್ರಭಾರದಲ್ಲಿ ಮುಂದುವರಿಸುವಂತೆ ಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.4:23(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳ ನೇಮಕಾತಿ ಬಗ್ಗೆ.

ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಈ ಕೆಳಗಿನಂತೆ ಅಧ್ಯಕ್ಷರುಗಳನ್ನು ದಿನಾಂಕ 01.07.2022ರಿಂದ ಅನ್ವಯವಾಗುವಂತೆ ಮುಂದಿನ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನೇಮಕಾತಿ ಮಾಡಲಾಯಿತು.

| ಕ್ರ. ಸಂ. | ಸ್ನಾತಕೋತ್ತರ ಅಧ್ಯಯನ ವಿಭಾಗದ ಹೆಸರು | ಅಧ್ಯಕ್ಷರ ಹೆಸರು |
|---|---|---|
| 1. | ಅರ್ಥಶಾಸ್ತ್ರ ಅಧ್ಯಯನ ವಿಭಾಗ | ಪ್ರೊ. ವಿಶ್ವನಾಥ |
| 2. | ಆಂಗ್ಲ ಅಧ್ಯಯನ ವಿಭಾಗ | ಪ್ರೊ. ಡಿ. ಆರ್. ಶಶಿಧರ್ |
| 3. | ರಾಜ್ಯಶಾಸ್ತ್ರ ಅಧ್ಯಯನ ವಿಭಾಗ | ಪ್ರೊ. ಜಯರಾಜ್ ಅಮೀನ್ |
| 4. | ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ | ಶ್ರೀ ಉಮೇಶ್ಚಂದ್ರ ಎಂ. ಪಿ. |
| 5. | ಆನ್ವಯಿಕ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ | ಪ್ರೊ. ಮೊಹಮ್ಮದ್ ಶಫೀವುಲ್ ಮುಸ್ತಾಕ್ ಬಿ. |
| 6. | ಜೀವ ವಿಜ್ಞಾನ ಅಧ್ಯಯನ ವಿಭಾಗ | ಪ್ರೊ. ಚಂದ್ರು ಎಂ. |

**ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ:ಸಾ.ಸ.4:24(2022)**

ವಿಷಯ: ಡಾ. ಉಮೇಶ್ ನಾಯ್ಕ್, ಸಹಾಯಕ ಪ್ರಾಧ್ಯಾಪಕರು, ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರ ವಿರುದ್ಧ ವಿಭಾಗದ ವಿದ್ಯಾರ್ಥಿಗಳು ನೀಡಿರುವ ದೂರಿನ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಮುಂದಿನ ಒಂದು ತಿಂಗಳ ಒಳಗೆ ತನಿಖೆಯನ್ನು ಪೂರ್ಣಗೊಳಿಸಿ, ವರದಿಯನ್ನು ಸಲ್ಲಿಸಲು ಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ತಪ್ಪಿದಲ್ಲಿ ಸಮಿತಿಯ ಮೇಲೆ ಸೂಕ್ತ ಶಿಸ್ತುಕ್ರಮ ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ: ಕಾನೂನು ಘಟಕ:ಸಾ.ಸ.4:25(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಡಾ. ವಜೀದಾ ಬಾನೊ, ಡಾ. ದಯಾನಂದ ನಾಯ್ಕ್ ಮತ್ತು ಡಾ. ನಾಗಪ್ಪ ಗೌಡ ಆರ್. ಇವರನ್ನು ಅವರು ಮೂಲತಃ ನೇರ ನೇಮಕಗೊಂಡಿದ್ದ ಘಟಕ ಕಾಲೇಜುಗಳಿಗೆ ಮರು

ವರ್ಗಾವಣೆಗೊಳಿಸಲು ದಿನಾಂಕ 27.08.2021ರ ಸಿಂಡಿಕೇಟು ಸಭೆಯಲ್ಲಿ ಕೈಗೊಂಡಿರುವ ನಿರ್ಣಯವನ್ನು ರದ್ದುಗೊಳಿಸುವಂತೆ ಸದರಿಯವರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ಇತರರ ವಿರುದ್ಧ ಹೂಡಿರುವ ರಿಟ್ ಅರ್ಜಿ ಸಂಖ್ಯೆ 17243/2021 ಗೆ ಸಂಬಂಧಿಸಿದಂತೆ ಪ್ರಸಕ್ತ ಸ್ಥಿತಿಗತಿ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.4:26(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಭಾವನೆಯನ್ನು ಮರುನಿಗದಿಪಡಿಸುವ ಸಮಿತಿ ನಡವಳಿಗಳ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.4:27(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ/ಘಟಕ/ ಸ್ವಾಯತ್ತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತಾ ಪಟ್ಟಿಯನ್ನು ಅನುಮೋದಿಸುವ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.4:28(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ಸಂಶೋಧನಾ ಕಾರ್ಯಕ್ರಮಕ್ಕೆ ನೋಂದಣಿಗೊಂಡು ಕಾರಣಾಂತರಗಳಿಂದ ಸಂಶೋಧನಾ ಕಾರ್ಯವನ್ನು ಮುಂದುವರಿಸಲು/ನಿಗದಿತ ಸಮಯದೊಳಗೆ ಪ್ರಬಂಧ ಮಂಡಿಸಲು ಅಸಾಧ್ಯವಾಗಿರುವ ಸಂಶೋಧನಾ ವಿದ್ಯಾರ್ಥಿಗಳು ಪ್ರಬಂಧ ಮಂಡನೆ ಮಾಡದೆ ಹೆಚ್ಚಿನ ಸಮಯಾವಕಾಶ ಕೋರಿ ಸಲ್ಲಿಸಿರುವ ಮನವಿಯ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಕೂಲಂಕುಷವಾಗಿ ಚರ್ಚಿಸಿ ಅನುಮೋದಿಸಲಾಯಿತು. ಇದನ್ನು ಪೂರ್ವೋದಾರಣೆಯೆಂದು ಪರಿಗಣಿಸತಕ್ಕದ್ದಲ್ಲ ಎಂದು ಸ್ಪಷ್ಟಪಡಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.4:29(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕುಂದಾಪುರ ಕನ್ನಡದ ಸಂಶೋಧನೆ ಮತ್ತು ಅಧ್ಯಯನಕ್ಕಾಗಿ ಪ್ರತ್ಯೇಕ ಪೀಠ ಸ್ಥಾಪನೆಯ ಪ್ರಸ್ತಾವನೆಗೆ ಮೂಲನಿಧಿ ಒದಗಿಸುವ ಬಗ್ಗೆ.

ನಿರ್ಣಯ: ಅಧ್ಯಯನ ಪೀಠದ ಮೂಲ ನಿಧಿಗೆ ರೂ.25.00 ಲಕ್ಷ (ರೂಪಾಯಿ ಇಪ್ಪತ್ತೈದು ಲಕ್ಷ ಮಾತ್ರ) ವಿಶ್ವವಿದ್ಯಾನಿಲಯದಿಂದ ಒದಗಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ:ಸಾ.ಸ.4:30(2022)**

ವಿಷಯ: ಕರ್ನಾಟಕದ ಮಾಜಿ ಕುಲಪತಿಗಳ ವೇದಿಕೆ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯ ಜಂಟಿಯಾಗಿ ಒಂದು ದಿನದ ಸಮ್ಮೇಳನವನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆಸುವ ಬಗ್ಗೆ.

ನಿರ್ಣಯ: ಸಮ್ಮೇಳನಕ್ಕೆ ರೂ.5.00 (ರೂಪಾಯಿ ಐದು ಲಕ್ಷ ಮಾತ್ರ) ವನ್ನು ವಿಶ್ವವಿದ್ಯಾನಿಲಯದ ವತಿಯಿಂದ ನೀಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.4:31(2022)**

ವಿಷಯ: ಡಾ. ಶಾಮಸುಂದರ್ ಜೆ., ಸಹಾಯಕ ಪ್ರಾಧ್ಯಾಪಕರು ಇವರ ಮೇಲಿನ ಇಲಾಖಾ ವಿಚಾರಣೆ – ದಂಡನೆ ಆದೇಶವನ್ನು ಪುನರ್ ಪರಿಶೀಲಿಸಿ ದೋಷಮುಕ್ತಗೊಳಿಸುವಂತೆ ಹಾಗೂ ತಡೆಹಿಡಿಯಲಾದ ವೇತನ ಭಡ್ತಿ ಹಾಗೂ ವೇತನ ಬಾಕಿ ಮೊತ್ತವನ್ನು ನೀಡುವಂತೆ ಸಲ್ಲಿಸಿರುವ ಮನವಿಯ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಕೂಲಂಕುಷವಾಗಿ ಚರ್ಚಿಸಿ, ಡಾ. ಶಾಮಸುಂದರ್ ಜೆ., ಇವರ ಮನವಿ ದಿನಾಂಕ 22.04.2022 ಮತ್ತು ನಿರ್ದೇಶಕರು (ಪ್ರಭಾರ), ಜ್ಞಾನ ಕಾವೇರಿ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ, ಇವರು ಡಾ. ಶಾಮಸುಂದರ್ ಜೆ., ಇವರ ಪ್ರಗತಿಯ ಬಗ್ಗೆ ನೀಡಿರುವ ಪತ್ರ ದಿನಾಂಕ 26.04.2022ಗಳನ್ನು ಪರಿಶೀಲಿಸಲಾಯಿತು. ಅಂತಿಮವಾಗಿ, ಡಾ. ಶಾಮಸುಂದರ್ ಜೆ., ಇವರ ಮನವಿ ಮತ್ತು ಸ್ನಾತಕೋತ್ತರ ಕೇಂದ್ರದ ಪ್ರಭಾರ ನಿರ್ದೇಶಕರು ತಮ್ಮ ಪತ್ರದಲ್ಲಿ ಡಾ. ಶಾಮಸುಂದರ್ ಜೆ., ಇವರು ತಮ್ಮ ನಡತೆಯನ್ನು ತಿದ್ದಿಕೊಂಡಿರುವ ಬಗ್ಗೆ ನೀಡಿರುವ ವರದಿಯನ್ನು ಅಂಗೀಕರಿಸಿ, ಸದರಿಯವರ ಅಮಾನತು ಅವಧಿಯನ್ನು ಕರ್ತವ್ಯದ ಅವಧಿಯೆಂದು ಪರಿಗಣಿಸಿಕೊಂಡು, ತಡೆಹಿಡಿಯಲಾದ ವೇತನ ಭಡ್ತಿ ಮತ್ತು ವೇತನ ಬಾಕಿ ಮೊತ್ತಗಳನ್ನು ಪಾವತಿಸಲು ಕ್ರಮ ಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.4:32(2022)**

ವಿಷಯ: ಡಾ. ಪಾರ್ವತಿ ಅಪ್ಪಯ್ಯ ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ.

ನಿರ್ಣಯ: ರೆಡ್ ಕ್ರಾಸ್ ಪ್ರತಿ ಶೈಕ್ಷಣಿಕ ವರ್ಷದ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಿ, ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿ ಆಡಳಿತಾತ್ಮಕ ಅನುಮೋದನೆಯನ್ನು ಪಡೆದುಕೊಂಡು ಕಾರ್ಯಕ್ರಮಗಳನ್ನು ನಡೆಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.4:33(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿ ಹುದ್ದೆಯ ಪ್ರಭಾರವನ್ನು ವಹಿಸಿದ ಬಗ್ಗೆ.

ನಿರ್ಣಯ: ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.4:34(2022)**

ವಿಷಯ: ನ್ಯಾಯಾಲಯದಲ್ಲಿ ಹೂಡಿರುವ ದಾವೆಗಳು – ಸರ್ಕಾರಕ್ಕೆ ಮಾಹಿತಿ ನೀಡುವ ಕುರಿತು.

ನಿರ್ಣಯ: ಪ್ರಕರಣದ ದಾಖಲೆಗಳನ್ನು ಪರಿಶೀಲಿಸಿದಾಗ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯಲ್ಲಿ ಮಾಡಿರುವ ಆರೋಪಗಳು ಮೇಲ್ನೋಟಕ್ಕೆ ಸತ್ಯಕ್ಕೆ ದೂರವೆಂದು ಮತ್ತು ದುರುದ್ದೇಶ ಪೂರಿತವೆಂದು ಕಂಡು ಬಂದಿರುವುದರಿಂದ ಈ ಕುರಿತು ಸಮಗ್ರ ದಾಖಲೆಗಳನ್ನು ಮುಂದಿನ ಸಿಂಡಿಕೇಟಿನ ವಿಶೇಷ ಸಭೆಯಲ್ಲಿ ಮಂಡಿಸಬೇಕೆಂಬುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.4:35(2022)**

ವಿಷಯ: ಶ್ರೀ ರಮೇಶ ಕೆ., ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ.

ವಿಷಯ 1: ಮಂಗಳೂರು ವಿಶ್ವವಿದ್ಯಾನಿಲಯದ ಎಲ್ಲಾ ಘಟಕ ಕಾಲೇಜು, ವಿಶ್ವವಿದ್ಯಾನಿಲಯ ಕೇಂದ್ರ ಹಾಗೂ ಸ್ನಾತಕೋತ್ತರ ಕೇಂದ್ರದ ವಿದ್ಯಾರ್ಥಿಗಳಿಗೆ ವಸ್ತ್ರ ಸಂಹಿತೆಯನ್ನು ಜಾರಿಗೆ ತರುವಂತೆ ಪ್ರಸ್ತಾವನೆ.

ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯದ ಎಲ್ಲಾ ಘಟಕ ಕಾಲೇಜುಗಳಲ್ಲಿ ಸಮವಸ್ತ್ರದ ನಿಯಮವನ್ನು ಕಡ್ಡಾಯಗೊಳಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಮುಂದುವರಿದು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ Prospectus ನ ನಾಲ್ಕನೇ ಪುಟದ ***"ಕಾಲೇಜಿಗೆ ಸಂಬಂಧಿಸಿದ ಪ್ರಮುಖ ನಿಯಮಗಳು"*** ಇದರ ಕ್ರಮ ಸಂಖ್ಯೆ 3 ನ್ನು ತೆಗೆದು ಹಾಕಬೇಕೆಂಬುದಾಗಿಯೂ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.4:36(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಜೀವ ರಸಾಯನಶಾಸ್ತ್ರ ವಿಭಾಗ, ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಎ.ಹೆಚ್. ಸ್ನೇಹರಾಣಿ, ಇವರನ್ನು ಮೈಸೂರು ವಿಶ್ವವಿದ್ಯಾನಿಲಯದ ಜೈವಿಕಶಾಸ್ತ್ರ ವಿಭಾಗದಲ್ಲಿ ಖಾಲಿಯಿರುವ ಹುದ್ದೆಗೆ ವರ್ಗಾಯಿಸುವ ಕುರಿತು ಸರ್ಕಾರಕ್ಕೆ ವಿಶ್ವವಿದ್ಯಾನಿಲಯದ ಅಭಿಪ್ರಾಯ ನೀಡುವ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.4:37(2022)**

ವಿಷಯ: ಡಾ. ಅನಿತಾ ರವಿಶಂಕರ್, ಸಮಾಜಶಾಸ್ತ್ರದ ಸಹ ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾನಿಲಯ ಇವರ ಮೇಲಿನ ಮಂಗಳೂರು ಲೋಕಾಯುಕ್ತ ಪೊಲೀಸ್ ಠಾಣಾ ಮೊಕದ್ದಮೆ – ಅಪರಾಧ ನಿರ್ಣಯದ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ:ಸಾ.ಸ.4:38(2022)**

ವಿಷಯ: ವಿಶ್ವವಿದ್ಯಾನಿಲಯದ 40ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರದಾನ ಮಾಡಿದ ಚಿನ್ನದ ಪದಕಗಳ ತಯಾರಿಕಾ ವೆಚ್ಚದ ಅನುಮೋದನೆ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.4:39(2022)**

ವಿಷಯ: ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಸಾರ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅವಶ್ಯವಿರುವ MOOC Audio Video setup & FM Community Radio Station on turnkey basis ನಲ್ಲಿ ಅನುಷ್ಠಾನಗೊಳಿಸುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಚರ್ಚಿಸಲಾಯಿತು. ಸರಕಾರದಿಂದ ಅನುದಾನ ಲಭ್ಯವಾದಲ್ಲಿ ಮಾತ್ರ ಪ್ರಸ್ತಾವನೆಯನ್ನು ಪರಿಗಣಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಇತರ ವಿಷಯಗಳು:**

1. ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟು ಸಭೆಯ ನಿರ್ಣಯದನುಸಾರ ಸರಕಾರಕ್ಕೆ ಸಂಬಂಧಿಸಿದ ಪತ್ರ ವ್ಯವಹಾರಗಳನ್ನು ಬೆಂಗಳೂರಿನಲ್ಲಿ ನೋಡಿಕೊಳ್ಳಲು ನಿಯೋಜಿಸಲಾಗಿರುವ ಶ್ರೀ ವಿನಾಯಕ, Liason Officer ಇವರಿಗೆ ವಿಶ್ವವಿದ್ಯಾನಿಲಯದಿಂದ ಕೆಲಸ ಕಾರ್ಯಗಳನ್ನು ನೀಡಿದ್ದು, ಈವರೆಗೆ ಯಾವುದೇ ಸಂಭಾವನೆ ಪಾವತಿಸದಿರುವ ವಿಷಯದ ಬಗ್ಗೆ ಸಿಂಡಿಕೇಟು ಸದಸ್ಯರೋರ್ವರು ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಶ್ರೀ ವಿನಾಯಕ ಇವರು ನೇಮಕಾತಿಗೊಂಡ ದಿನಾಂಕದಿಂದ ಸದರಿಯವರಿಗೆ ವಹಿಸಿದ ಕೆಲಸ ಕಾರ್ಯಗಳಿಗನುಸಾರವಾಗಿ ಶೀಘ್ರದಲ್ಲಿ ಸಂಭಾವನೆ ಪಾವತಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

2. ಮಂಗಳೂರು ವಿಶ್ವವಿದ್ಯಾನಿಲಯದಿಂದ ವಿದ್ಯಾರ್ಥಿಗಳು, ಸಂಶೋಧಕರು ಮತ್ತು ಉದ್ಯೋಗಿಗಳ ಅಹವಾಲು, ಆಡಳಿತ ವಿಚಾರಗಳಿಗೆ ಸಂಬಂಧಿಸಿ, ಅನುಮೋದನೆಗೆ ಸರಕಾರದ ಅನುಮೋದನೆಗಾಗಿ / ನಿರ್ದೇಶನಕ್ಕಾಗಿ ಬರೆಯಲಾಗಿರುವ ಪತ್ರಗಳು, ಪರಿನಿಯಮಗಳ ಅಗತ್ಯತೆ ಮತ್ತು ಪ್ರಗತಿಯ ಪರಿಶೀಲನೆಗಾಗಿ ಈ ಕೆಳಗಿನ ಸಮಿತಿಯನ್ನು ರಚಿಸಲಾಯಿತು.

   1. **ಪ್ರೊ. ವಿಶ್ವನಾಥ** - **ಅಧ್ಯಕ್ಷರು**
      ಸಿಂಡಿಕೇಟು ಸದಸ್ಯರು
      ಹಾಗೂ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ

   2. **ಶ್ರೀ ವಿವೇಕಾನಂದ ಪನಿಯಾಲ** - **ಸದಸ್ಯರು**
      ಸಿಂಡಿಕೇಟು ಸದಸ್ಯರು

   3. **ಪ್ರೊ. ಜಯರಾಜ್ ಅಮೀನ್** - **ಸದಸ್ಯರು**
      ಡೀನರು, ಕಲಾ ನಿಕಾಯ

   ಸಮಿತಿಯ ನಿಯಮಗಳು ಮತ್ತು ಷರತ್ತುಗಳನ್ನು (Terms and conditions) ಗಳನ್ನು ಅಧಿಸೂಚನೆಯಲ್ಲಿ ನಮೂದಿಸಬೇಕೆಂಬುದಾಗಿಯೂ ಸಿಂಡಿಕೇಟು ನಿರ್ಣಯಿಸಿತು.

3. ಕಾಲೇಜುಗಳ ಸಂಯೋಜನೆಗೆ ಸಂಬಂಧಿಸಿದ ಸ್ಥಳೀಯ ವಿಚಾರಣಾ ಸಮಿತಿಗೆ ಹಾಜರಾಗುವ ಸಿಂಡಿಕೇಟು ಸದಸ್ಯರುಗಳಿಗೆ ಉಪಸ್ಥಿತಿ ಭತ್ಯೆ ಮತ್ತು ಇತರೇ ಖರ್ಚುಗಳನ್ನು ನೀಡಲು ಸೂಕ್ತ ಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

4. ಮಂಗಳೂರು ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳನ್ನು ಹೊರತುಪಡಿಸಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000 ದ ಪ್ರಕರಣ 28 ರ ಪ್ರಕಾರ ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಸದಸ್ಯರುಗಳಾಗಿ ನಾಮನಿರ್ದೇಶನಗೊಳ್ಳುವ ಎಲ್ಲಾ ಸಿಂಡಿಕೇಟು ಸದಸ್ಯರುಗಳಿಗೆ ಉಪಸ್ಥಿತಿ ಭತ್ಯೆಯನ್ನು ದಿನಾಂಕ 16.05.2022ರ ಸಿಂಡಿಕೇಟು ಸಭೆಯಿಂದ ಅನ್ವಯವಾಗುವಂತೆ ಪಾವತಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

5. ಮಂಗಳೂರು ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನ ಶಿಕ್ಷಕರುಗಳಿಗೆ ಈ ಹಿಂದೆ ನೀಡಲಾಗಿರುವ ಲ್ಯಾಪ್‌ಟಾಪ್‌ಗಳಲ್ಲಿ ಹಲವಾರು ಲ್ಯಾಪ್‌ಟಾಪ್‌ಗಳು ಹಾಳಾಗಿರುವುದರಿಂದ ಪ್ರಸ್ತುತ ಸೂಕ್ತ ವಿಶೇಷಣ (Specifications) ಗಳನ್ನು ನಿಗದಿಪಡಿಸಿಕೊಂಡು, ವಿಶ್ವವಿದ್ಯಾನಿಲಯದ ಶಿಕ್ಷಕರುಗಳಿಗೆ ಹೊಸ ಲ್ಯಾಪ್‌ಟಾಪ್‌ಗಳನ್ನು ನೀಡಲು ಸೂಕ್ತ ಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

6. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಹಿರಿಯ ಸಹಾಯಕ ಹುದ್ದೆಯ ಭಡ್ತಿಗೆ ಸಂಬಂಧಿಸಿ, ಪ್ರಥಮ ದರ್ಜೆ ಸಹಾಯಕರು ಮತ್ತು ಶೀಘ್ರಲಿಪಿಗಾರರ ಅನುಪಾತವನ್ನು 4:1 ಎಂದು ನಿಗದಿಪಡಿಸಿ, ಸರಕಾರಕ್ಕೆ ಸಲ್ಲಿಸಲಾಗಿರುವ ತಿದ್ದುಪಡಿ ಪರಿನಿಯಮದ ಪ್ರಸ್ತುತ ಸ್ಥಿತಿಗತಿಯ ಬಗ್ಗೆ ಸಿಂಡಿಕೇಟು ಸದಸ್ಯರೋರ್ವರು ಅಪೇಕ್ಷಿಸಿದ ಹಿನ್ನೆಲೆಯಲ್ಲಿ ಪ್ರಸ್ತುತ ಸರಕಾರದಿಂದ ಕೆಲವೊಂದು ಮಾಹಿತಿಯನ್ನು ಒದಗಿಸುಂತೆ ಪತ್ರ ಬಂದಿರುವುದಾಗಿ ಕುಲಸಚಿವರು ಸಭೆಗೆ ತಿಳಿಸಿದರು. ಅದರಂತೆ, ಸಂಬಂಧಿತ ಸಿಬ್ಬಂದಿಗಳಿಂದ ತಿದ್ದುಪಡಿ ಪರಿನಿಯಮಕ್ಕೆ ಸಂಬಂಧಿಸಿ, ಆಕ್ಷೇಪಣೆಗಳೇನಾದರೂ ಇದ್ದಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವಂತೆ ತಿಳಿಸಲಾಗಿತ್ತು. ಅದರಂತೆ ಸಿಬ್ಬಂದಿಗಳು ತಮ್ಮ ಪತ್ರಗಳನ್ನು ಸಲ್ಲಿಸಿರುವುದಾಗಿ ತಿಳಿಸಿದರು. ಸದರಿ ಆಕ್ಷೇಪಣೆಗಳನ್ನು ಸರಕಾರಕ್ಕೆ ಸಲ್ಲಿಸಲಾಗುವುದೆಂಬುದಾಗಿಯೂ ತಿಳಿಸಿದರು.

ಈ ಬಗ್ಗೆ ಚರ್ಚಿಸಲಾಗಿ, ತಿದ್ದುಪಡಿ ಪರಿನಿಯಮಕ್ಕೆ ಸಂಬಂಧಿಸಿ, ಪ್ರಥಮ ದರ್ಜೆ ಸಹಾಯಕರು ಮತ್ತು ಶೀಘ್ರಲಿಪಿಗಾರರ ಆಕ್ಷೇಪಣೆಗಳನ್ನು ಮಾತ್ರ ಸರಕಾರಕ್ಕೆ ಕಳುಹಿಸಲು ಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

7. ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಾದ ವಿಶ್ವವಿದ್ಯಾನಿಲಯ ಕಾಲೇಜು, ಮಂಗಳಗಂಗೋತ್ರಿ, ವಿಶ್ವವಿದ್ಯಾನಿಲಯ ಕಾಲೇಜು, ನೆಲ್ಯಾಡಿ ಮತ್ತು ವಿಶ್ವವಿದ್ಯಾನಿಲಯ ಕಾಲೇಜು, ಬನ್ನಡ್ಕ ಕಾಲೇಜುಗಳಿಗೆ ಪ್ರಾಂಶುಪಾಲರುಗಳನ್ನು ನಿಯೋಜನೆ ಮಾಡಲು ಸೂಕ್ತ ಕ್ರಮಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

8. ಸಿಬ್ಬಂದಿ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳನ್ನು ಹಂತ ಹಂತವಾಗಿ ವರ್ಗಾವಣೆ ಮಾಡಲು ಮತ್ತು ಅನುಷ್ಠಾನ ವರದಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ಸಲ್ಲಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

9. ವಿಶ್ವವಿದ್ಯಾನಿಲಯದಲ್ಲಿ ಖಾಲಿಯಿರುವ ಉಪಕುಲಸಚಿವರು ಹಾಗೂ ಇತರೇ ಶಿಕ್ಷಕೇತರ ಹುದ್ದೆಗಳಿಗೆ ನಿಯಮಾನುಸಾರ ಮುಂಭಡ್ತಿಯನ್ನು ನೀಡಲು ಸೂಕ್ತ ಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಮಾನ್ಯ ಕುಲಪತಿಗಳು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/- | ಸಹಿ/- |
| ಕುಲಸಚಿವರು | ಕುಲಪತಿಗಳು. |